Govt. of Karnataka [C.R.P. 67

Deposition Sheets (R.P. No.

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ

## ಪ್ರಕರಣ ಸಂಖ್ಯೆಃ 1362 /2025

**ದಿನಾಂಕಃ 25-02-2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯೂಃ | 3 | ಪಿಡಬ್ಲ್ಯೂ | 2 |
|---|---|---|---|
| ಹೆಸರು | ರವಿ. ಜಿ | | |
| ತಂದೆ / ಗಂಡನ ಹೆಸರು | ಗೋವಿಂದಪ್ಪ | | |
| ವಯಸ್ಸು | 45 | | |
| ಉದ್ಯೋಗ | ಫ್ಯಾಕ್ಟರಿಯಲ್ಲಿ ಕೆಲಸ | | |
| ವಾಸ | ಕುಪ್ಪೂರು ಗ್ರಾಮ | | |

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ದಿಃ 27-06-2025 ರಂದು ನನ್ನ ದ್ವಿಚಕ್ರ ವಾಹನ ನಂ.ಕೆಎ-06-ಇಆರ್-7142 ಕಳ್ಳತನವಾಗಿರುತ್ತೆ. ಸದರಿ ವಿಚಾರವಾಗಿ ತುಮಕೂರು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಶಿರಾ ಪೋಲಿಸ್ ಠಾಣೆಯಿಂದ ನನಗೆ ದೂರವಾಣಿ ಕರೆ ಮಾಡಿ , ನನ್ನ ದ್ವಿಚಕ್ರ ವಾಹನ ಸಿಕ್ಕಿದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ಇಂಡಿಮ್ನಿಟಿ ಬಾಂಡ್ ಬರೆದುಕೊಟ್ಟು ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ಇಂಡಿಮ್ನಿಟಿ ಬಾಂಡ್ ನ್ನು **ನಿಪಿ-3** ಎಂದು , ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿದ್ದು , ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನನ್ನ ದ್ವಿಚಕ್ರ ವಾಹನವನ್ನು ವಶಕ್ಕೆ ನೀಡುವಾಗ ಪೋಲಿಸರು ಬಾವಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಬಾವಚಿತ್ರಗಳನ್ನು ನೋಡಿ ಗುರುತಿಸಿದ್ದು , ಅದನ್ನು **ನಿಪಿ-4 ರಿಂದ ನಿಪಿ-7** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ**

ನಾನು ಪದವೀ ಮಾಡಿರುತ್ತೇನೆ. ನಾನು ಫ್ಯಾಕ್ಟರಿ ಕೆಲಸ ಮಾಡುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರವುದಿಲ್ಲ. ನಮ್ಮ ಫ್ಯಾಕ್ಟರಿಯಲ್ಲಿ ಸಿಸಿ ಟಿವಿ ಕ್ಯಾಮರಾ ಇದೆ ಎಂದರೆ ಸರಿ. ಶಿರಾ ಪೋಲಿಸರು ನನ್ನ ಮೋಟಾರ್ ಸೈಕಲ್ ನ್ನು ಈತನೇ ಕದ್ದಿರುತ್ತಾನೆ ಎಂದು ಆರೋಪಿಯನ್ನು ತೋರಿಸಿರುತ್ತಾರೆ. ನಮ್ಮ ಫ್ಯಾಕ್ಟರಿಯಲ್ಲಿದ್ದ ಸಿಸಿ ಟಿ ವಿ ಪೋಸ್ಟೇಜ್ ನ್ನು ಪೋಲಿಸರು ತೆಗೆದುಕೊಂಡಿರುವುದಿಲ್ಲ. ಪೋಲಿಸರು ಹೇಳಿದ ಮೇರೆಗೆ ಈತನೇ ಆರೋಪಿ ಎಂದು ನನಗೆ ಗೊತ್ತಾಗಿರುತ್ತದೆ. ನಾನು ಆರೋಪಿಯನ್ನು ಕಾಣ್ಣಾರೆ ನೋಡಿರುವುದಿಲ್ಲ. ನನ್ನ ಮೋಟಾರ್ ಸೈಕಲ್ ನ್ನು ಆರೋಪಿಯೇ ಕದ್ದಿರುತ್ತಾನೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಪೋಲಿಸರ ಮಾತು ಕೇಳಿಕೊಂಡು ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.